## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## Crl Misc. ಸಂಖ್ಯೆ: 59 /2024

**ಸಾಕ್ಷಿಯನ್ನು ದಿಃ 26.09.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎಸ್.ಎನ್ ವಕೀಲರಿಂದಃ**

ನಾನು ಈ ಕೇಸಿನಲ್ಲಿ 1ನೇ ಅರ್ಜಿದಾರಳಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.

ನನ್ನ ಮತ್ತು ಎದುರುದಾರರ ಮದುವೆ ಆಮಂತ್ರಣ ಪತ್ರಿಕೆ ನಿಪಿ-1 ಎಂದು, 4 ಬಾವಚಿತ್ರಗಳನ್ನು ನಿಪಿ-2 ರಿಂದ 5 ಎಂದು, ಅದಕ್ಕೆ ಸಂಬಂಧಿಸಿದ ಸಿಡಿಯನ್ನು ನಿಪಿ-6 ಎಂದು, ಆರಾಧನಾ ಸೇವಾ ಸಂಸ್ಥೆಯವರು ನೀಡಿದ ನೋಟೀಸನ್ನು ನಿಪಿ-7 ಎಂದು, ಮೊಕದ್ದಮೆ ಸಂಃ 276/2018 ರಲ್ಲಿ ಪ್ರ.ವ.ವರದಿಯ ಯಥಾ ನಕಲನ್ನು ನಿಪಿ-8 ಎಂದು, ಸದರಿ ಪ್ರಕರಣದಲ್ಲಿ ನೀಡಿದ ದೂರಿನ ಯಥಾ ನಕಲನ್ನು ನಿಪಿ-9 ಎಂದು, ಸದರಿ ಪ್ರಕರಣದಲ್ಲಿ 3 ಸಾಕ್ಷಿದಾರರ ಹೇಳಿಕೆಗಳ ಯಥಾ ನಕಲುಗಳನ್ನು ನಿಪಿ-10 ರಿಂದ 12 ಎಂದು, ದಿಃ 25.10.2023 ರಂದು ಪೋಲಿಸರು ನೀಡಿದ ಸ್ವೀಕೃತಿಯನ್ನು ನಿಪಿ-13 ಎಂದು, ಅದೇ ದಿನ ಪೋಲಿಸರು ನೀಡಿದ ಹಿಂಬರವನ್ನು ನಿಪಿ-14 ಎಂದು, 2 ಮತ್ತು 3ನೇ ಅರ್ಜಿದಾರರಿಗೆ ಸಂಬಂಧಿಸಿದಂತೆ ಎರಡು ಶಾಲಾ ಶುಲ್ಕ ಪಾವತಿಸಿದ ರಶೀದಿಗಳನ್ನು ನಿಪಿ-15 ಮತ್ತು 16 ಎಂದು, ಎದುರುದಾರರ ಹೆಸರಿನಲ್ಲಿರುವ ವಾಹನ ಸಂಃ ಕೆ.ಎ.04-ಇಪಿ 4117ಕ್ಕೆ ಮೂಲ RCಯನ್ನು ನಿಪಿ-17 ಎಂದು, ಎದುರುದಾರರ ಹೆಸರಿನಲ್ಲಿರುವ ವಾಹನ ಸಂಃ ಕೆ.ಎ.03-ಎಜೆ-5983ಕ್ಕೆ ಮೂಲ RCಯನ್ನು ನಿಪಿ-18 ಎಂದು, ಎದುರುದಾರರಿಗೆ ಸಂಬಂಧಿಸಿದಂತೆ ಆಟೋ ಚಾಲನೆ ಪರವಾನಿಗೆ ಎರಡು ಮಾಹಿತಿ ವಿವರಗಳನ್ನು ನಿಪಿ-19 ಮತ್ತು 20 ಎಂದು ಗುರುತಿಸಲಾಯಿತು.

(**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.